ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 116-121
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಐತಿಹಾಸಿಕ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ತ್ರಿಯಂಬಕೇಶ್ವರ ದೇವಾಲಯ : ಒಂದು ಅಧ್ಯಯನ

**ಮಣಿಯಪ್ಪ ಕೆ. ಜಿ[1] ಮತ್ತು ಪ್ರೊ. ಸಿ. ಈ. ಲೋಕೇಶ[2]**
[1]ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.
[2]ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ, ಪುರಾತತ್ವಶಾಸ್ತ್ರ ಮತ್ತು ವಸ್ತುಸಂಗ್ರಹಾಲಯಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***
*ಭಾರತದ ಇತಿಹಾಸದ ಪುಟಗಳನ್ನ ತೆರೆದು ನೋಡಿದಾಗ ದಕ್ಷಿಣ ಭಾರತವನ್ನು ಆಳ್ವಿಕೆ ಮಾಡಿದ ಹಲವಾರು ಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವು ವಿಶೇಷ ಮನ್ನಣೆಯನ್ನು ಪಡೆದ ಸಾಮ್ರಾಜ್ಯವಾಗಿದೆ. ಇವರ ಕಾಲದಲ್ಲಿನ ಸಾವಿರಾರು ದೇವಾಲಯಗಳು, ಕಟ್ಟಡಗಳು. ಸ್ಮಾರಕಗಳು, ಗುಡಿ–ಗೋಪುರಗಳು, ಶಾಸನಗಳು ಕೆರೆ–ಕಟ್ಟೆಗಳ ನಿರ್ಮಾಣ ಇನ್ನೂ ಹಲವಾರು ರೀತಿಯ ಪ್ರಾಚೀನತೆಯಿಂದ ಕೂಡಿರುವ ಅವಶೇಷಗಳು ದೊರೆತಿರುವುದಕ್ಕೆ ಸಾಕ್ಷಿಯಾಗಿವೆ. ಚಾಮರಾಜನಗರ ಜಿಲ್ಲೆಯು ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿದ್ದ ನಾಡಾಗಿತ್ತು. ತೆರಕಣಾಂಬಿ ಪ್ರದೇಶವು ವಿಜಯನಗರ ಅರಸರ ಕಾಲದಲ್ಲಿನ ಒಂದು ಪ್ರಮುಖ ಸೀಮೆಯಾಗಿತ್ತು. ಇಲ್ಲಿನ ಸಮೀಪದ ಪ್ರಸಿದ್ಧ ಸ್ಥಳವಾದ ತ್ರಿಯಂಬಕಪುರದ ಶ್ರೀ ತ್ರಿಯಂಬಕೇಶ್ವರ ದೇವಾಲಯವು ವಿಜಯನಗರದ ಅರಸರ ಕಾಲಘಟ್ಟದಲ್ಲಿ ನಿರ್ಮಾಣವಾಗಿದೆ.*

**Keywords:** *ಶಾಸನಗಳು, ತ್ರಿಯಂಬಕೇಶ್ವರ, ಪಾರ್ವತಿ ದೇವಿಯ ಮೂರ್ತಿ ಶಿಲ್ಪ (ತ್ರಿಯಂಬಕೇಶ್ವರಿ), ದ್ವಾರಮಂಟಪ, ಮುಖಮಂಟಪ, ಶಿಲ್ಪಗಳು.*

## ಪೀಠಿಕೆ

ಒಂದು ನೆಲದ ಸಾಂಸ್ಕೃತಿಕ ಪರಂಪರೆಯ ಹಾದಿ, ಸ್ಥಳದ ಪಟ್ಟಣಗಳ ಉಗಮ ಮತ್ತು ಗ್ರಾಮದ ಐತಿಹ್ಯವನ್ನು ಹೇಳುವುದು ಒಂದು ವೈಶಿಷ್ಟ್ಯತೆ. ಈ ದೃಷ್ಟಿಕೋನದಿಂದ ತ್ರಿಯಂಬಕಪುರ ಗ್ರಾಮವು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದ್ದು ಅಧ್ಯಯನ ದೃಷ್ಟಿಯಿಂದ ಪ್ರಮುಖವಾಗಿ ಶಾಸನಗಳು ಬಹಳ ಮುಖ್ಯವಾಗಿ ದೊರೆಯುತ್ತವೆ. ಇತಿಹಾಸ ಪ್ರಸಿದ್ಧಿ ತ್ರಿಯಂಬಕೇಶ್ವರ ದೇವಾಲಯ (ತ್ರಿಯಂಬಕಪುರ) ಕರ್ನಾಟಕ, ಕೇರಳ ಮತ್ತು ತಮಿಳುನಾಡು ಈ ಮೂರು ಗಡಿಕಲ್ಲುಗಳು ಸೇರುವ ಸ್ಥಳವಾಗಿತ್ತು. ಲಂಬಕರ್ಣರಾಯನೆಂಬುವನು ತ್ರಿಕದಂಬೇಶ್ವರನನ್ನು ಸ್ಥಾಪಿಸಿದನೆಂದು ಅಭಿಪ್ರಾಯಿಸಲಾಗಿದೆ. ಪ್ರಸ್ತುತ ಈ ಗ್ರಾಮವನ್ನು ಸ್ಥಳೀಯರು ತಿರೊಂಪುರ ಎಂದು ಕರೆಯುತ್ತಾರೆ. ತೆರಕಣಾಂಬಿಯು ಪೂರ್ವದಲ್ಲಿ ಈ ಗ್ರಾಮದಲ್ಲಿಯೆ ಇದ್ದಿತೆಂದು ತ್ರಿಯಂಬಕಪುರವೇ ಮುಂದೆ ತೆರಕಣಾಂಬಿಯಾಯಿತೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ

***Please cite this article as:*** ಮಣಿಯಪ್ಪ, ಕೆ. ಜಿ ಮತ್ತು ಸಿ. ಈ. ಲೋಕೇಶ. (2026). ಐತಿಹಾಸಿಕ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ತ್ರಿಯಂಬಕೇಶ್ವರ ದೇವಾಲಯ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 116–121

**ಅಧ್ಯಯನದ ಉದ್ದೇಶಗಳು:**

- ತ್ರಿಯಂಬಕೇಶ್ವರ ದೇವಾಲಯದ ಮೂಲ ಸ್ಥಾಪನೆ ಮತ್ತು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ (ವಿಶೇಷವಾಗಿ ಅರಸರ ಹಾಗೂ ದಂಡನಾಯಕರ ಕಾಲದಲ್ಲಿ) ಅದಕ್ಕೆ ದೊರೆತ ರಾಜಾಶ್ರಯವನ್ನು ದಾಖಲಿಸುವುದು.
- ವಿಜಯನಗರ ಶೈಲಿಯ ದ್ರಾವಿಡ ಮತ್ತು ವಾಸ್ತುಕಲೆ, ಸೂಕ್ಷ್ಮ ಕೆತ್ತನೆಗಳುಳ್ಳ ಕಂಬಗಳು ಮತ್ತು ದೇವಾಲಯದ ಮಂಟಪಗಳ ವಿನ್ಯಾಸವನ್ನು ಕೂಲಂಕಷವಾಗಿ ಪರಿಶೀಲಿಸುವುದು.
- ದೇವಾಲಯದಲ್ಲಿರುವ ಪ್ರಾಚೀನ ಶಾಸನಗಳಲ್ಲಿ ಉಲ್ಲೇಖವಿರುವ ದಾನ ಧರ್ಮಗಳು, ಆಡಳಿತ ವ್ಯವಸ್ಥೆ ಮತ್ತು ಕೊಡುಗೆಗಳ ಬಗ್ಗೆ ಮಾಹಿತಿ ಕಲೆಹಾಕುವುದು.

**ಐತಿಹಾಸಿಕ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ತ್ರಿಯಂಬಕೇಶ್ವರ ದೇವಾಲಯ**

ತ್ರಿಯಂಬಕಪುರವು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಿಂದ ಪೂರ್ವಕ್ಕೆ 12 ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಐತಿಹಾಸಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಪ್ರಾಚೀನ ಗ್ರಾಮವಾಗಿದೆ. ಗ್ರಾಮದ ಈ ಪ್ರಾಚೀನತೆಯನ್ನು ಗಮನಿಸಿದಾಗ ಗಂಗರಿಂದ ಪ್ರಾರಂಭವಾಗಿ ಚೋಳ, ಹೊಯ್ಸಳ, ವಿಜಯನಗರ ಅರಸರು, ಉಮ್ಮತ್ತೂರಿನ ಪಾಳೇಗಾರರು ಮತ್ತು ಮೈಸೂರು ಒಡೆಯರ ಆಳ್ವಿಕೆಗೆ ಈ ಪ್ರದೇಶವು ಒಳಪಟ್ಟಿತೆಂದು ಈ ಗ್ರಾಮದಲ್ಲಿ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ.

ತ್ರಿಯಬಂಕಪುರ ಗ್ರಾಮದಲಿ 19 ಶಾಸನಗಳು ದೊರೆತಿದ್ದು ಅವುಗಳಲ್ಲಿ ಅದಲ್ಲೇ 114 ಸಾಲುಗಳಲ್ಲಿ ಬರೆದ ಶಾಸನ ಬರಹವಿದೆ. ಇದು ಉಮ್ಮತ್ತೂರು ಪಾಳೇಗಾರರಿಗೆ (ವಿಜಯನಗರ ಅರಸರ ಸಾಮಂತರು) ಸಂಬಂಧಿಸಿದ್ದು ದೇವಾಲಯದ ದಾನ ದತ್ತಿ ವಿಷಯಗಳನ್ನು ತಿಳಿಸುತ್ತದೆ. ಹಾಗೆಯೇ ಈ ಶಾಸನ ವಿಜಯನಗರದ ಅರಸರು ಪದಿನಾಲ್ಕುನಾಡ ಅರಸರಾದ ಬಗ್ಗೆ ಮಾಹಿತಿಯನ್ನ ಒಳಗೊಂಡಿದೆ. ಈ ದೇವಸ್ಥಾನ ಪ್ರಾಕಾರದ ಗೋಡೆಗಳಲ್ಲಿ ಎರಡು ಶಾಸನಗಳು ಮಹಾದ್ವಾರದ ಪಕ್ಕದಲ್ಲಿ ಒಂದು ಶಾಸನವಿದ್ದು ಉಳಿದವುಗಳು ಮಹಾದ್ವಾರದ ಹೊಸ್ತಿಲುಗಳ ಮೇಲೆ ಬಾಗಿಲಮುಂದೆ ಇದ್ದು ಮುಖಮಂಟಪದಲ್ಲಿ ನಂದಿ ಲಿಂಗವಿದೆ ಇದರ ಮುಂಭಾಗದಲ್ಲಿ ಶಾಸನಗಳಿವೆ. ಗ್ರಾಮದ ಪಶ್ಚಿಮ ಹೊಲವೊಂದರಲ್ಲಿಯೂ ಶಾಸನವಿದೆ ಇಲ್ಲಿರುವ ಶಾಸನಗಳಲ್ಲಿ 5 ತಾಮ್ರದ ಶಾಸನಗಳಾಗಿವೆ. ಕ್ರಿ.ಶ.1492ರ ಶಾಸನವು ಉಮ್ಮತ್ತೂರಿನ ದೊರೆ ಇಮ್ಮಡಿರಾಯ ಒಡೆಯನ ಮಗ ವೀರನಂಜರಾಯ ಒಡೆಯನ ಮಂತ್ರಿಯ ಪ್ರಧಾನನಾದ ದೇವರಾಯನ ಮಗ ಪರ್ವತಯ್ಯನು ಹೊಸದಾಗಿ ಬೊಮ್ಮನಹಳ್ಳಿಯನ್ನು ನಿರ್ಮಾಣ ಮಾಡಿ ತ್ರಿಯಂಬಕ ದೇವರಿಗೆ ಸರ್ವಮಾನ್ಯ ಗ್ರಾಮವಾಗಿ ಬಿಟ್ಟ ವಿಚಾರ ಮತ್ತು ಅಂದಿನ ಕಾಲದ ರಾಜರು ದೇವರ ಹೆಸರಿನಲ್ಲಿ ಕೊಡುತ್ತಿದ್ದ ದಾನದತ್ತಿ ವಿವರವನ್ನು ತಿಳಿಸುತ್ತದೆ. ಕ್ರಿ.ಶ.1576ರ ಶಾಸನವು ತ್ರಿಯಂಬಕ ದೇವರ ಅಭೀಷೇಕದ ನೀರಿಗಾಗಿ 'ಕೂಪ' (ಬಾವಿ) ವನ್ನು ನಿರ್ಮಾಣ ಮಾಡಿಸಿ ಜೀರ್ಣೋದ್ಧಾರದ ವಿಚಾರವಿದೆ. ಶಂಕರಯ್ಯನು ನೂತನವಾಗಿ 'ಕೂಪ' (ಬಾವಿ) ವನ್ನು ಮಾಡಿಸಿದ್ದರೆ, ಬೊಮ್ಮರಸ ಇದರ ಜೀರ್ಣೋದ್ಧಾರ ಕಾರ್ಯವನ್ನು ಮಾಡಿಸಿದನು. ಕ್ರಿ.ಶ.1417ರ ಶಾಸನವು ವಿಜಯನಗರ ಅರಸರ ಸಂಗಮ ವಂಶದ ವಂಶಾವಳಿಯನ್ನು ತಿಳಿಸಿ ಬುಕ್ಕ ಮತ್ತು ಹರಿಹರ, ಹರಿಹರನ ಮಗ ಬುಕ್ಕಣ್ಣ, ಬುಕ್ಕಣ್ಣನ ಮಗ ಹರಿಹರನು ತ್ರಿಯಂಬಕ ದೇವರಿಗೆ ಭೂ ಪ್ರದೇಶವನ್ನು ದಾನವಾಗಿ ನೀಡಿದ ವಿಷಯದ ಪ್ರಸ್ತಾಪವಿದೆ.

ದೇವಿಚಂದ್ರ ಕವಿ ಬರೆದಿರುವ ಸುಮಾರು 17ನೇ ಶತಮಾನದ 1770–1841ರ ರಾಜಾವಳಿ ಕಥಾಸಾರದಲ್ಲಿ ತ್ರಿಯಂಬಕಪುರದ ಪ್ರಸ್ತಾಪವಿದ್ದು "... ಆರುನೂರಿಪ್ಪತ್ತಾಗಾಲಂತು ಸಾವಿರದ ಮುನ್ನೂರ

ಹತ್ತು ಶಕವರುಷಂ ಬರಂ ನಡೆಯಲು ತ್ರಿಯಂಬಕರಾದ ತನ್ನ ಪೇರಿಸಂ ತ್ರ್ಯಾಂ ಬಾಕೇಶ್ವರಾಯಲಯಂ ಮಾಡಿಸಿ ತ್ರಿಯಂಬಕ ಪುರಮಂ, ಕಟ್ಟಿಸಿ ಕೆಲದಿವನಮಿರ್ದನಾತನೆಮಂ ಬಳಿಯಂ ಆನೆಗುಂದಿಯಂ ಹರಿಹರರಾಯನಾದಿ ಮೂವರೊಳು ದೇವನ್ನರಾಯಂ ಉಮ್ಮತ್ತೂರು ಸಂಸ್ಥಾನದೊಳಿರ್ದನವನ ಪೌದ್ರಭುಜಂಗರಾಯಂ ಹರಿಹರರಾಯಂ ಕೊಡುಗುನಾಡ ತೆರಕನಾಂಬಿಯೊಳಿರ್ದನಾತನುಂ ಕುಮಾರ ವೀರರಾಯಂ ಹಿರಿಯ ನಾಡ ತಗಡೂರಿನಲ್ಲಿ ಪ್ರಭುವಾದಂ" ಎಂದು ಉಲ್ಲೇಖಿಸಿದೆ.

**ತ್ರಿಯಂಬಕೇಶ್ವರ ದೇವಾಲಯ**

ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯವು ಚೌಕಾಕಾರ ಮತ್ತು ಆಯತಾಕಾರದಲ್ಲಿ ನಿರ್ಮಾಣ ಮಾಡಲಾಗಿದ್ದು, ಪೂರ್ವ ಮತ್ತು ದಕ್ಷಿಣ ದಿಕ್ಕಿನ ಭಾಗಗಳಲ್ಲಿ ಮಹಾದ್ವಾರಗಳನ್ನು ಕಾಣಬಹುದಾಗಿದೆ. ದೇವಾಲಯದ ಮುಂಭಾಗದಲ್ಲಿ ದೀಪಸ್ಥಂಭ, ಬಲಿಪೀಠ ಮತ್ತು ನಂದಿ ಮಂಟಪಗಳಿವೆ. ದೇವಾಲಯದ ಉತ್ತರಕ್ಕೆ ಪಾರ್ವತಿ ಗುಡಿಯು (ತ್ರಿಯಂಬಕೇಶ್ವರಿ) ಪಶ್ಚಿಮಕ್ಕೆ ಪಂಚಲಿಂಗಗಳಿರುವ ಗುಡಿಗಳಿವೆ. ಈ ಗುಡಿಗಳಲ್ಲಿ ಐದು ವಿವಿಧ ರೀತಿಯ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಆದರೆ ಒಂದು ಪೀಠದಲ್ಲಿ ಲಿಂಗವಿಲ್ಲದೆ ತೆಂಗಿನಕಾಯಿಯನ್ನು ಇಟ್ಟು ಪೂಜೆ ಮಾಡಲಾಗುತ್ತಿದೆ. ದೇವಾಲಯದ ನೈರುತ್ಯ ದಿಕ್ಕಿನಲ್ಲಿರುವ 54 ಕಂಬಗಳ ವಿಶಾಲವಾದ ಕಲ್ಯಾಣ ಮಂಟಪವಿದೆ. ಜೊತೆಗೆ ಪ್ರಾಕಾರದ ಆಗ್ನೇಯ ಮೂಲೆಗೆ ಎರಡು ಗರ್ಭಗುಡಿಗಳಿವೆ, ಅವುಗಳಲ್ಲಿ ಕ್ರಮವಾಗಿ ಮಹಿಷಾಸುರ ಮರ್ದಿನಿ, ಸಪ್ತಮಾತೃಕೆಯರ ಶಿಲ್ಪಗಳು ಮತ್ತು ಪೂವಾರ್ಧ ಗುಡಿಯು ಯೋಗ ಶಾಲೆಯಾಗಿದೆ. ಪ್ರಾಕಾರದ ಈಶಾನ್ಯ ಮೂಲೆಯಲ್ಲಿ ಕಂಬಗಳಿಂದ ಕೂಡಿದ ಮಂಟಪಗಳ ಅವಶೇಷಗಳು ಕಂಡು ಬರುತ್ತದೆ. ದೇವಾಲಯದ ಮೂಲ ಗರ್ಭಗುಡಿಯು ಪೂರ್ವಾಭಿಮುಖವಾಗಿ ಕಲ್ಲು ಪೀಠದ ಮೇಲೆ ತ್ರಿಯಂಬಕೇಶ್ವರ ಮೂರ್ತಿ (ಲಿಂಗ) ಇದೆ. ದೇವಾಲಯದ ಗರ್ಭಗೃಹದ (garbhagriha – ದೇವರ ಮೂಲ ಗರ್ಭಗುಡಿ) ಸುತ್ತಲೂ ಒಳಭಾಗದಲ್ಲಿಯೇ ಸಾಂದರ ರೀತಿಯ ಪ್ರದಕ್ಷಿಣ ಪಥವನ್ನು (pradakshina patha – ಸುತ್ತು ಬರುವ ಹಾದಿ) ಹೊಂದಿರುವ ಈ ದೇವಾಲಯದಲ್ಲಿ ಕಾಣಬಹುದುದಾಗಿದೆ. ಈ ದೇವಾಲಯದ ಗರ್ಭಗುಡಿಗೆ ಸೂರ್ಯನ ಬೆಳಕಿನ ಕಿರಣಗಳು ನೇರವಾಗಿ ತ್ರಿಯಂಬಕೇಶ್ವರ ಲಿಂಗದ ಮೇಲೆ ಬೀಳುವುದು ಇಲ್ಲಿಯ ವಿಶೇಷವಾಗಿದೆ. ಚೌಕಾಕಾರದ ಗರ್ಭಗುಡಿಯ ಅಂತರಾಳವನ್ನು ಪೂರ್ವ ದಿಕ್ಕಿಗಿರುವ ಬಾಗಿಲಿನ ಮೂಲಕ ಸೇರಿಸಲಾಗಿದೆ. ಅಂತರಾಳವು ರಂಗಮಂಟಪಕ್ಕೆ ತೆರೆದುಕೊಂಡಂತಿದೆ, ರಂಗಮಂಟಪದ ಪಶ್ಚಿಮಕ್ಕೆ ಅಂತರಾಳವನ್ನು ಸುತ್ತುವರಿದು ಎರಡು ತೆರೆದ ದಾರಿಗಳಿದ್ದು ಅವು ಗರ್ಭಗೃಹ ಮತ್ತು ಅಂತರಾಳವನ್ನು ಸುತ್ತುವರಿದು ಪ್ರದಕ್ಷಿಣಾ ಪಥಗಳನ್ನು ಸೇರಿರುತ್ತದೆ. ರಂಗಮಂಟಪಕ್ಕೆ ಅಥವಾ ನವರಂಗಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ ಎರಡು ಬಾಗಿಲುಗಳಿದ್ದು, ಅವು ಮುಖಮಂಟಪಗಳಿಗೆ ಕೊಂಡೊಯ್ಯುತ್ತವೆ. ನವರಂಗದ ಮಧ್ಯದಲ್ಲಿ ಎರಡು ಸಾಲುಗಳಲ್ಲಿ ಒಟ್ಟು ಹತ್ತು ಕಂಬಗಳಿವೆ. ಈ ಕಂಬಗಳ ಮಧ್ಯದಲ್ಲಿ ಒಂದು ನಂದಿ ಶಿಲ್ಪವಿದೆ. ಅದರ ಮೇಲ್ಭಾಗದಲ್ಲಿ ಭುವನೇಶ್ವರಿಯನ್ನು ಕೆತ್ತಲಾಗಿದೆ, ನವರಂಗದ ಅದಿಷ್ಠಾನವು ಉಪಾನ, ಜಗತಿ, ತ್ರಿಪಟ್ಟಕುಮುದ, ಕಾಂತ, ಪಟ್ಟಿಕ, ಪ್ರತಿಗಳ ರಚನೆಯಿಂದ ಕೂಡಿದೆ. ಭಿತ್ತಿಯಲ್ಲಿ ನಿಯಮಿತವಾದ ಅಂತರಕ್ಕೊಂದರಂತೆ ಅರೆಗಂಬಗಳನ್ನು ಕೆತ್ತಲಾಗಿದೆ.

**ಪಾರ್ವತಿ ದೇವಿಯ ಮೂರ್ತಿ ಶಿಲ್ಪ (ತ್ರಿಯಂಬಕೇಶ್ವರಿ)**

ಪಾರ್ವತಿ ದೇವಿಯ ಮೂರ್ತಿಯು 2 ಅಡಿ ಅರಳಿದ ಕಮಲದ ಪೀಠದ ಸುಮಾರು 5 ಅಡಿ ಎತ್ತರವಿದ್ದು ವಿಗ್ರಹವು ಉತ್ತರ ಭಾಗದಲ್ಲಿದೆ. ಪಾರ್ವತಿ ಶಿಲ್ಪವು ನಿಂತ ಭಂಗಿಯಲ್ಲಿದ್ದು ದೇವಿಯ

ಅಭಯ ಪದ್ಮ ಮತ್ತು ಧಾನ ಮುದ್ರೆಗಳ ಹಸ್ತವನ್ನು ಹೊಂದಿದ್ದಾಳೆ. ಇಷ್ಟು ಸಂದರವಾದ ಮತ್ತು ಎತ್ತರದ ತ್ರಿಯಂಬಕೇಶ್ವರಿ ವಿಗ್ರವು ಮತ್ತೆಲ್ಲಿಯೂ ಕಂಡುಬರುವುದಿಲ್ಲವೆಂದು ಸ್ಥಳಿಯರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ನವರಂಗದ ಉತ್ತರ ಭಾಗದಲ್ಲಿ ಮಯೂರ ವಾಹನರೂಢನಾದ ಸುಬ್ರಮಣ್ಯ ಮತ್ತು ಹನುಮಂತನಿಂದ ರಾಮಾಯಣವನ್ನು ಕೇಳುತ್ತಿರುವ ರಾಮ ಲಕ್ಷ್ಮಣ ಮತ್ತು ಸೀತೆಯರ ಸುಂದರವಾದ ವಿಗ್ರಹಗಳಿವೆ. ಇಲ್ಲಿನ ದಕ್ಷಿಣ ಭಾಗದಲ್ಲಿ ದುಂಡನೆಯ ಗಣೇಶನ ವಿಗ್ರಹವಿದೆ ಹಾಗೆಯೇ ನವರಂಗದಲ್ಲಿ ಸುಂದರವಾದ ನಂದಿಯ ಶಿಲ್ಪವಿದೆ. ನವರಂಗವು ಸುಮಾರು 5x5 ಉದ್ದ ಮತ್ತು ಅಗಲವಾದ ಅಂಕಣದಿಂದ ಕೂಡಿದೆ. ನವರಂಗದಲ್ಲಿ ವಿಜಯನಗರ ಶೈಲಿಯ (ಕಾಲದ) 6 ಕಂಬಗಳಿದ್ದು ವಿಸ್ತಾರವಾದ ಅಂಕಣಗಳನ್ನು ಹೊಂದಿದ್ದು ಒಂದೊಂದು ಕಂಬಗಳಲ್ಲೂ ಕಥಾನಕ ಶಿಲ್ಪಗಳು ಶಿವನಿಗೆ ಸಂಬಂಧಪಟ್ಟ ಶಿಲ್ಪಗಳು, ನವಿಲಿನ ಶಿಲ್ಪಗಳು, ಜಿಂಕೆಯ ಶಿಲ್ಪಗಳು, ಹೂಬಳ್ಳಿ ಸುರುಳಿಗಳ ಶಿಲ್ಪಗಳು, ವ್ಯಾಳ ಶಿಲ್ಪಗಳು, ಗಣಪತಿ ಶಿಲ್ಪ, ಅರಳಿದ ಪುಷ್ಪಬೋಧಿಗೆ ಕೆತ್ತನೆ ಮುಖ್ಯವಾಗಿದೆ. ಹಾಗೆಯೇ ಕಾದಾಟದ ಪ್ರಸಂಗದ ಕೆತ್ತನೆಯುಳ್ಳ ಕಂಬಗಳ ಅಷ್ಟ ದಿಕ್ಕುಗಳ ಕೆತ್ತನೆಯನ್ನು ಕಾಣಬಹುದಾಗಿದೆ. ಆರು ಕಂಬಗಳಾಗಿ ವಿವಿಧ ರೀತಿಯಲ್ಲಿ ಕಲಾಕಾರನು ಚಾಣಾಕ್ಷತನದ ಕೆತ್ತನೆಯನ್ನು ಕಾಣಬಹುದಾಗಿದೆ. ನವರಂಗದಲ್ಲಿ ವಿಶೇಷವೆಂದರೆ ಶೈವ ದೇವಾಲಯದ ಒಂದು ಕಂಬದಲ್ಲಿ ಶ್ರೀಕೃಷ್ಣನ ಕೊಳಲು ನುಡಿಸುವ ಶಿಲ್ಪವಿದ್ದು, ಆ ಕೊಳಲು ನಾದವನ್ನು ಗೋವುಗಳು ಆಲಿಸುತ್ತಿರುವ ಚಿತ್ರಣವನ್ನು ಕಂಬದಲ್ಲಿ ಕಲಾಕಾರನು ಕೆತ್ತನೆಯನ್ನು ಮಾಡಿದ್ದಾನೆ. ಹಾಗೆಯೇ ಗರ್ಭಗೃಹ, ಸುಖನಾಸಿ ದೇವಾಲಯದ ಭಿತ್ತಿಯಲ್ಲಿ ಅರೆಗಂಬಗಳು, ಕೋಷ್ಟಗುಡಿಗಳಲ್ಲಿ ಕಂಬಗಳನ್ನು ಕಾಣಬಹುದಾಗಿದೆ.

**ದಕ್ಷಿಣ ಭಾಗದ ಪ್ರಾಕಾರದ ದ್ವಾರಮಂಟಪ**

ಪ್ರಾಕಾರದ ದಕ್ಷಿಣ ಭಾಗದಲ್ಲಿ ದೊಡ್ಡ ದ್ವಾರ ಮಂಟಪವಿದೆ. ಪ್ರಕಾರದ ಈಶಾನ್ಯದ ಮೂಲದಲ್ಲಿ ಒಂದು ಮಂಟಪವಿದ್ದು, ಸಂಪೂರ್ಣವಾಗಿ ಆ ಮಂಟಪವನ್ನು ಜೀರ್ಣೋದ್ದಾರ ಮಾಡಲಾಗಿದೆ. ಸ್ಥಳಿಯರು ಇದನ್ನು ರಂಗಮಂಟಪ, ಕಲ್ಯಾಣ ಮಂಟಪ ಎಂದು ಹೇಳುತ್ತಾರೆ. ನೈರುತ್ಯ ದಿಕ್ಕಿನಲ್ಲಿ ದೇವಾಲಯದ ಪ್ರಾಕಾರದಲ್ಲಿ ಮಹಾನವಮಿ ಮಂಟಪವಿದ್ದು ಸುಮಾರು 24 ಅಂಕಣಗಳಿಂದ ಕೂಡಿದೆ ಈ ಮಂಟಪದಲ್ಲಿ 54 ಕಂಬಗಳಲ್ಲಿ ವಿವಿಧ ದೇವತೆಗಳ ಚಿತ್ರಗಳಿವೆ. ಈ ಚಿತ್ರವು ಒಂದೇ ಶಿರ ಹೊಂದಿದ್ದು 2 ರೀತಿಯಾಗಿ ಕಾಣುತ್ತದೆ. ಒಂದು ಕೈಯಿಂದ ಒಂದು ಭಾಗವನ್ನು ಮುಚ್ಚಿಕೊಂಡರೆ ಪುರಷರೂಪವಾಗಿಯೂ, ಮತ್ತೊಂದು ಕೈಯಲ್ಲಿ ಮುಚ್ಚಿಕೊಂಡರೇ ಸ್ತ್ರೀ ರೂಪವಾಗಿಯೂ ಕಾಣುವುದು ವಿಶೇಷವಾಗಿರುವುದನ್ನ ಈ ಮಂಟಪದಲ್ಲಿ ಕಾಣಬಹುದು.

**ಪೂರ್ವದ ದ್ವಾರಮಂಟಪ**

ಈ ದ್ವಾರಮಂಟಪವು ಸುಮಾರು 32 ಅಡಿ ಎತ್ತರವನ್ನು ಹೊಂದಿದ್ದು, ಬಾಗಿಲುವಾಡದ ಲಲಾಟ ಬಿಂಬದಲ್ಲಿ ನಂದಿಯ ಶಿಲ್ಪವಿದ್ದು ಬಾಳೆಗೊನೆಯಾಕಾರದ ಕಮಲದ ಮೊಗ್ಗಿನಂತೆ (ಪುಷ್ಪಬೋದಿಕ) ಕಲಾಕಾರನು ಬಳಸಿದ್ದಾನೆ. ಪಾದ ಅದಿಷ್ಠಾನದ ಸುಂದರವಾದ ಜೋಡಣೆಯನ್ನು ಹೊಂದಿದ್ದು ಭಿತ್ತಿಯಲ್ಲಿ ಅರೆಗಂಬಗಳು, ಕೋಷ್ಠಗುಡಿಗಳು, ಹಾರದಲ್ಲಿ ಸುಂದರ ಶಿಲ್ಪಗಳನ್ನು ಕಾಣಬಹುದಾಗಿದೆ. ದ್ವಾರ ಮಂಟಪದ ಮುಂದೆ 60 ಅಡಿ ಎತ್ತರದ ದೀಪದ ಕಂಬಕ್ಕೆ ಅದರ ಭದ್ರತೆಗಾಗಿ ಅಲ್ಲಿ ಮಂಟಪವನ್ನು ನಿರ್ಮಾಣ ಮಾಡಲಾಗಿದೆ. ಹಾಗೆಯೇ ದೇವಾಲಯದ ಮುಂದೆ ಪ್ರಾಂಗಣದಲ್ಲಿ ಸುಮಾರು 5 ಅಡಿ ಎತ್ತರದ ಮಂಟಪವಿದ್ದು, ಅಲ್ಲಿ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.

**ಮುಖಮಂಟಪ**

ಮುಖಮಂಟಪದಲ್ಲಿ 12 ಕಂಬಗಳಿದ್ದು ಕಂಬದಲ್ಲಿ ಉಪಕಂಬಗಳ ಕೆತ್ತನೆಯನ್ನು ಕಾಣಬಹುದಾಗಿದೆ. ಆ ಉಪ ಕಂಬಗಳಿಂದ ಬೋಧಿಗೆಗೆ ಶಿಲ್ಪವನ್ನು ಕೆತ್ತನೆ ಮಾಡಿದ್ದು ಒಂದೊಂದು ಕಂಬಗಳಲ್ಲೂ ಸೂಕ್ಷ್ಮ ಕೆತ್ತನೆಯನ್ನು ಕಾಣಬಹುದಾಗಿದೆ. ಹಾಗೆಯೇ ಮತ್ತೊಂದು ಕಂಬದಲ್ಲಿ ಕುದುರೆಯ ದೇಹ ಮತ್ತು ಸಿಂಹದ ಮುಖವಿರುವ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ. ಈ ಮುಖ ಮಂಟಪವು ಮೂರು ಅಂಕಣಗಳನ್ನು ಒಳಗೊಂಡಿದ್ದು 12 ಕಂಬಗಳು 12 ರೀತಿಯಲ್ಲಿ ಕೆತ್ತನೆ ಕಂಡುಬಂದಿದ್ದು ಅವುಗಳಲ್ಲಿ ಕಂಬದ ಪೀಠದಲ್ಲಿ ಸಣ್ಣ ಸಣ್ಣ ಶಿಲ್ಪಗಳ ಮೇಲೆ ಕಂಬವನ್ನು ಕೂರಿಸಿದ ರೀತಿಯಲ್ಲಿ ಕಂಬದ ಕೆತ್ತನೆಯು ಕಂಡುಬಂದಿದೆ. ಆ ಕಂಬಗಳಲ್ಲಿ ಪಾರ್ವತಿ, ಪರಮೇಶ್ವರ, ನಂದಿಯ ಶಿಲ್ಪಗಳು, ಗಣಪತಿಯ ಶಿಲ್ಪಗಳು, ನಟರಾಜನ ಶಿಲ್ಪಗಳು, ಹಾಗೆ ಕಮಲ ದಳಗಳನ್ನು ಚಿತ್ರಿಸಿದ್ದಾರೆ.

**ಮಹಾಮಂಟಪ**

ದೇವಾಲಯದ ಆಗ್ನೇಯಕ್ಕಿರುವ ಮಹಾಮಂಟಪವು 54 ಕಂಬಗಳಿಂದ ಕೂಡಿದ್ದು ಆ ಕಂಬಗಳೂ ಸಹ ವಿಶಿಷ್ಟ ನೈಪುಣ್ಯತೆ ಕಲಾ ಶೈಲಿಯನ್ನು ವಿವಿಧ ಶಿಲ್ಪಗಳನ್ನು ಚಿತ್ರಿಸಲಾಗಿದೆ. ದೇವಾಲಯದ ಮುಂಭಾಗವಿರುವ ದೀಪದ ಕಂಬ ಇದರ ಎತ್ತರ ಸುಮಾರು 60 ಅಡಿ ಎತ್ತರವನ್ನು ಹೊಂದಿದ್ದು ಆ ಕಂಬದ ಭದ್ರತೆಗಾಗಿ ಮಂಟಪವನ್ನು ನಿರ್ಮಿಸಿದ್ದು ಶಿಲ್ಪಗಳನ್ನು ಕೆತ್ತಿಸಲಾಗಿದೆ.

ಕ್ರಿ.ಶ.1492ರಲ್ಲಿ ಉಮ್ಮತ್ತೂರು ದೊರೆಗಳೂ (ವಿಜಯನಗರ ಸಾಮಾಂತರು) ಶಾಸನ ಹಾಕಿಸಿರುವುದರಿಂದ ಇದರ ರಚನಾ ಕಾರ್ಯವು ಇವರಿಗಿಂತ ಹಿಂದಿನದು ಎಂದು ಊಹಿಸಲು ಸಾಧ್ಯ. ಈ ದೇವಸ್ಥಾನ ಗರ್ಭಗೃಹ ಮತ್ತು ಸುಖನಾಸಿಗಳು ಹೊಯ್ಸಳರ ಕಾಲಕ್ಕೆ ಸೇರಿದ್ದಾಗಿದ್ದು ಪೂರ್ವದ್ವಾರ ಮತ್ತು ಮಹಾದ್ವಾರ ವಿಜಯನಗರ ದೇವಾಲಯದ ಪ್ರಾಕಾರದ ಆಗ್ನೇಯ ದಿಕ್ಕಿನಲ್ಲಿ ದೊಡ್ಡದಾದ ಅಡುಗೆ ಮನೆಯಿದ್ದು ಒಳಕಲ್ಲು ದಿನನಿತ್ಯದ ಬಳಕೆಯ ವಸ್ತುಗಳು ಇವೆ. ಮುಖ್ಯ ದೇವಸ್ಥಾನದ ಪಶ್ಚಿಮದಲ್ಲಿ ಸುಂದರವಾದ ಪಂಚಲಿಂಗಗಳಿವೆ. ಇವುಗಳು ಒಂದೊಂದು ಜಾತಿಯ ಕಲ್ಲಿನಿಂದ ಅಂದರೆ ಒಂದೊಂದು ರೀತಿಯ ಹಿಮಕಲ್ಲು, ಬಳಪದ ಕಲ್ಲು, ಕಗ್ಗಲ್ಲು, ಬೆಳಚುಕಲ್ಲು ಮತ್ತು ಕಪ್ಪು ಕಲ್ಲಿನಿಂದ ನಿರ್ಮಿತವಾಗಿದೆ.

**ಉಪಸಂಹಾರ**

ಈ ಲೇಖನದಲ್ಲಿ ಪ್ರಮುಖವಾಗಿ ತ್ರಿಯಂಬಕೇಶ್ವರ ದೇವಾಲಯದಲ್ಲಿ ವಿಜಯನಗರದ ಪ್ರಧಾನ ವಾಸ್ತು ಶೈಲಿಯ ಕಲಾ ವೈಶಿಷ್ಟಗಳಿಂದ ಕೂಡಿದ ಹಲವಾರು ಸ್ತಂಭ ಪಂಕ್ತಿಗಳಿಂದ ಕೂಡಿದೆ. ಮಂಟಪಗಳು ಮುಖ್ಯವಾಗಿ ದ್ರಾವಿಡ ಶೈಲಿಯ ನಿರ್ಮಿತಿಗಳನ್ನು ಕಾಣಬಹುದಾಗಿದೆ. ವಿಜಯನಗರ ಅರಸರ ಸ್ಥಾಪಿತ ದೇವಾಲಯ ನಿರ್ಮಾಣವೆಂದರೆ ಅದೊಂದು ಬಗೆಯ ದೇವಕಾರ್ಯವೆಂದು ಬಗೆದಿದ್ದರೂ ಅವರ ಶೈಲಿಯೂ ಕೇವಲ ಶುಷ್ಕ ನಿಯಮ ನಿಷ್ಠೆಯಿಂದ ಪ್ರೇರಿತವಾದ ನೀರಸ ಶೈಲಿಯಾಗಿರಲಿಲ್ಲ, ಪೋಷಕ ರಾಜರುಗಳ ಧರ್ಮ ಶ್ರದ್ಧೆಗೂ ಸ್ಫೂರ್ತಿ, ವಿಶೇಷಕ್ಕೂ ಅನುಗುಣವಾಗಿ ಅವರು ತಮ್ಮ ಶೈಲಿಯ ವಿಶೇಷತೆಯನ್ನು ರೂಪಿಸಿಕೊಂಡವರಾಗಿದ್ದರು, ಆದಕಾರಣ ನಾವು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯ ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದಲ್ಲಿ ಕಾಣಬಹುದಾಗಿದೆ.

**ಆಕರ ಗ್ರಂಥಗಳು**


- ಅಪರ್ಣಾ, ಕೆ.ಎಸ್. (2001). *ದೇವಾಲಯ ವಾಸ್ತುಶಿಲ್ಪ ಪರಿಚಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- *ಎಪಿಗ್ರಾಫಿಯಾ ಕರ್ನಾಟಿಕ (ಕರ್ನಾಟಕದ ಶಾಸನಗಳು), ಸಂಪುಟ 3,* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

- *ಚಾಮರಾಜನಗರ ಜಿಲ್ಲಾ ಗೆಜೆಟಿಯರ್.* (2015). ಕರ್ನಾಟಕ ಸರ್ಕಾರ, ಕರ್ನಾಟಕ ಗೆಜೆಟಿಯರ್ ಇಲಾಖೆ.
- ಗೋಪಾಲ್, ಬಿ.ಆರ್. (1990). *ವಿಜಯನಗರ ಶಾಸನಗಳು– ಸಂಪುಟ 3.* ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ.
- ಹಯವದನ ರಾವ್, ಸಿ. (1930). *ಮೈಸೂರು ಗೆಜೆಟಿಯರ್–ಸಂಪುಟ–5.* ಬೆಂಗಳೂರು.
- *ಕನ್ನಡ ವಿಷಯ ವಿಶ್ವಕೋಶ–ಸಂಪುಟ 1* ಮತ್ತು *2.* (2007). (ಪರಿಷ್ಕೃತ), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.